## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **413** |
| **ಸದಸ್ಯರ ಹೆಸರು** | : | **ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **12.12.2024** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿ** |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರೂ.3503.63 ಕೋಟಿಗಳ ಪುರೋಭಿವೃದ್ಧಿ ತೆರಿಗೆ ಸಂಗ್ರಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು).</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿನ ಬಡಾವಣೆಗಳಲ್ಲಿನ ಭೂಸ್ವಾಧೀನ ಪ್ರಕ್ರಿಯೆಯ ಅಂತಿಮತೆಯ ನಂತರ ಸಂಬಂಧಪಟ್ಟ ಬಡಾವಣೆಗಳಿಗೆ ನಿಗದಿಪಡಿಸಿರುವ / ನಿಗದಿಪಡಿಸಲಾಗುವ ದರಗಳಂತೆ ಪುರೋಭಿವೃದ್ಧಿ ತೆರಿಗೆಯನ್ನು ಸಂಗ್ರಹಿಸುವುದು ಸರ್ಕಾರದ ನಿಲುವಾಗಿರುತ್ತದೆ.</td></tr>
<tr><td>ಆ)</td><td>ಅರ್ಕಾವತಿ ಮತ್ತು ನಾಡಪ್ರಭು ಕೆಂಪೇಗೌಡ ಬಡಾವಣೆಗಳಿಂದ ಸಂಗ್ರಹಿಸಲು ಬಾಕಿ ಇರುವ ತೆರಿಗೆ ಮೊತ್ತವೆಷ್ಟು: (ವಿವರ ನೀಡುವುದು)</td><td><table>
<tr><th>ಬಡಾವಣೆ ಹೆಸರು</th><th>ಸಂಗ್ರಹಿಸಲು ಬಾಕಿಯಿರುವ ಪುರೋಭಿವೃದ್ಧಿ ತೆರಿಗೆ ಮೊತ್ತ</th></tr>
<tr><td>ನಾಡಪ್ರಭು ಕೆಂಪೇಗೌಡ ಬಡಾವಣೆ</td><td>ರೂ.195,72,35,616/-</td></tr>
<tr><td>ಅರ್ಕಾವತಿ ಬಡಾವಣೆ</td><td>ರೂ.3,307,91,80,320/-</td></tr>
</table></td></tr>
<tr><td>ಇ)</td><td>ತೆರಿಗೆ ವಸೂಲಾತಿಯಲ್ಲಿ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು?</td><td>ಭೂಸ್ವಾಧೀನ ಯೋಜನೆಗಳು ಕಾನೂನಾತ್ಮಕ ಜಟಿಲತೆಯಿಂದ ಕೂಡಿರುವ ಕಾರಣ, ಸದರಿ ಯೋಜನೆಗಳ ಪರಿಷ್ಕರಣೆ ಕಾರ್ಯ ಪ್ರಕ್ರಿಯೆಯಲ್ಲಿರುವುದರಿಂದ ಈ ಹಂತದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮವಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.</td></tr>
</table>

**ಸಂಖ್ಯೆ: ನಅಇ 440 ಬೆಂಅಸೇ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ